**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ,** ದೇವದುರ್ಗ

**ಸಿ.ಸಿ ನಂಬರ್‌ಃ 854/2024**

**ಪಿರ್ಯಾದಿ** ಃ **ಸರ್ಕಾರದ ಪರವಾಗಿ** ದೇವದುರ್ಗ **ಪೊಲೀಸರು,**
ದೇವದುರ್ಗ **ತಾಲ್ಲೂಕು.**

**ವಿರುದ್ದ**

ಆರೋಪಿತರು ಃ 1. ಚನ್ನರೆಡ್ಡಿ ತಂದೆ ನಿಂಗಪ್ಪ, 45 ವರ್ಷ,

2. ವಿಶ್ವನಾಥ ರೆಡ್ಡಿ ತಂದೆ ನಿಂಗಪ್ಪ, 50 ವರ್ಷ,
3. ಭರತರಾಜ ತಂದೆ ವಿಶ್ವನಾಥರೆಡ್ಡಿ, 22 ವರ್ಷ,
4. ದಂಡಪ್ಪ ತಂದೆ ಅಮರಪ್ಪ, 31 ವರ್ಷ,
5. ಆದಪ್ಪ ತಂದೆ ಅಮರಪ್ಪ, 28 ವರ್ಷ,
6. ಶೀಲವಂತಿ ಗಂಡ ಚನ್ನರೆಡ್ಡಿ, 40 ವರ್ಷ,
7. ಪದ್ಮಾವತಿ ಗಂಡ ಅಮರಪ್ಪ, 60 ವರ್ಷ,
8. ಪಿಡ್ಡಪ್ಪ ತಂದೆ ಚನ್ನರೆಡ್ಡಿ, 28 ವರ್ಷ,

ಎಲ್ಲರೂ ವಾಸಾಃ ನೀಲಾವಂಜಿ ಗ್ರಾಮ, ತಾಃ ದೇವದುರ್ಗ,
ಜಿಃ ರಾಯಚೂರು.

**ದೋಷಾರೋಪಣೆ**

**ಶ್ರೀ** ರಫೀಕ್ ಅಹ್ಮದ್ **ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,** ದೇವದುರ್ಗ, **ಆದ ನಾನು ಈ ಕೆಳಗಿನ** ದೋಷಾರೋಪಣೆ**ಯನ್ನು ನಿಮ್ಮ ಮೇಲೆ ಹೊರಿಸುವುದೇನೆಂ** ದರೆ,

ದಿನಾಂಕ: 15-05-2024 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ನಿಲವಂಜಿ ಗ್ರಾಮದ ಹನುಮಂತ ದೇವರಗುಡಿ ಹತ್ತಿರ ಪಿರ್ಯಾದಿಯು ನೀರು ತರಲು ಹೋಗಿದ್ದಾಗ ಅಲ್ಲಿಗೆ ಆರೋಪಿ ನಂ.1 ರಿಂದ 8 ನೆದ್ದವರು ಜಗಳ ತೆಗೆಯುವ ಉದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದಿದ್ದು. ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ **143 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

2. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರೆಲ್ಲರು ಅಕ್ರಮ ಕೂಟ ರಚಿಸಿಕೊಂಡು ಜಗಳ ಮಾಡುವ ಸಮಾನ ಉದ್ದೇಶದಿಂದ, ಚಾಸಾ-6 ರವರು 2 ನೇ ಆರೋಪಿಯ ಮನೆಯ ಮುಂದೆ ಹೊಡೆಯುತ್ತಿದಾರೆ ಅಂತಾ ಹೇಳಿದ್ದರಿಂದ ಫಿರ್ಯಾದಿ ಅಲ್ಲಿಗೆ ಹೋಗಿ ನೋಡಲು ಅಲ್ಲಿಗೆ ಆರೋಪಿ ನಂ.1 ರಿಂದ 8 ನೆದ್ದವರು ಜಗಳ ತೆಗೆಯುವ ಉದ್ದೇಶದಿಂದ

ಅಕ್ರಮಕೂಟ ರಚಿಸಿಕೊಂಡು ಬಂದಿದ್ದು, ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ **147 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

3. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಜಗಳ ಮಾಡುವ ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು, ಫಿರ್ಯಾದಿದಾರರೊಂದಿಗೆ ಜಗಳ ಮಾಡಿದ್ದು, ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ 148 **ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

4. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರೆಲ್ಲರು ಅಕ್ರಮ ಕೂಟ ರಚಿಸಿಕೊಂಡು ಬಂದು, ಇದರಲ್ಲಿ ಆರೋಪಿ ನಂ.7 ಈಕೆಯು ಗಂಡನನ್ನು ಕೊಂದರೂ ನಾಚಿಕಿಲ್ಲಾ ನೀರಿಗಿ ಬಂದಾಳ ಅಂದಾಗ ಪಿರ್ಯಾದಿಯು ಗಂಡ ಸತ್ತರೆ ಬಾಳ್ವೆ ಮಾಡಬಾರದೇನು ಅಂತಾ ಕೇಳಿದ್ದಕ್ಕೆ ಸಿಟ್ಟಿಗೆ ಬಂದು ಅವರಲ್ಲಿ ಆರೋಪಿ ನಂ.1 ಮತ್ತು 2 ನೇದ್ದವರು ನಿನ್ನ ಗಂಡನನ್ನೇ ಮುಗಿಸಿವಿ ನಿಂದೇನಲೇ ಸೂಳೇ ಅಂತಾ ಅವಾಚ್ಯವಾಗಿ ಬೈದಿದ್ದು, ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ 504 **ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

5. ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ, ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದಿದ್ದು, ಆರೋಪಿ ನಂ.1 ಮತ್ತು 2 ನೇದ್ದವರು ಸಾಕ್ಷಿ ನಂಬರ್ 1 ನೇದ್ದವರಿಗೆ ಕೈಯಿಂದ ಹೊಡೆಬಡೆ ಮಾಡಿದ್ದು, ಆರೋಪಿ ನಂ. 6 ಮತ್ತು 7 ನೇದವರು ಹೊಡೆಬಡೆ ಮಾಡಿ ಪಿರ್ಯಾದಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದು, ಸಾಕ್ಷಿ ನಂ.4 ಮತ್ತು 5 ರವರು ಜಗಳ ಬಿಡಿಸಲು ಹೋದ ಅವರನ್ನು ಆರೋಪಿ ನಂ.5 ಮತ್ತು 8 ನೇದ್ದವರು ಹೊಡೆಬಡೆ ಮಾಡಿದ್ದು, **ಆ** ಮೇರೆಗೆ **ನಿಮ್ಮ ಮೇಲೆ ಭಾ.ದಂ.ಸಂ ಕಲಂ** 323 ಸಹವಾಚಕ ಕಲಂ 149 **ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

6. ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ, ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದಿದ್ದು, ಆರೋಪಿ ನಂ.3 ಮತ್ತು 4 ರವರು ಪಿರ್ಯಾದಿಯ ಕೈ ಮತ್ತು ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿ ಅವರ ಮಾನಕ್ಕೆ ಕುಂದುಂಟು ಮಾಡಿ ಅವರಿಗೆ ಅಪಮಾನ ಮಾಡಿದ್ದು, **ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ 354 ಸಹವಾಚಕ ಕಲಂ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

7. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೊಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬಂದು, ಆ ಪೈಕಿ ಆರೋಪಿ ನಂ.5 ಮತ್ತು 8 ನೇದ್ದವರು ಹೊಡೆಬಡೆ ಮಾಡಿ, ನಂತರ ಎಲ್ಲರೂ ಸೇರಿಕೊಂಡು ನಮ್ಮ ಸಂಬಂಧಿಕರು ಜೈಲಿನಲ್ಲಿದ್ದಾರೆ ಅವರು ಬಂದ ನಂತರ ನಿಮ್ಮನ್ನು ಸಹ ಜೀವ ಸಹಿತ ಉಳಿಸುವದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿದ್ದು. ಆ ಮೂಲಕ ನಿಮ್ಮ ಮೇಲೆ ಭಾ.ದಂ.ಸಂ ಕಲಂ 506 **ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

ಸಹಿ/-

ದಿನಾಂಕ **26.03.2026**
ಸ್ಥಳ ದೇವದುರ್ಗ

(ಶ್ರೀ ರಫೀಕ್ ಅಹ್ಮದ್ )
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.